10.	ಮಸೀದಿ ಮುಸ್ಲಮಾನರ ಹಳ್ಳಿ ಗೌರಿಬಿದನೂರು ತಾ:	20,000–00	–
11.	ಮಸೀದಿ ಆಶರ್‌ಕಾನ ಅಂಜುಮನೆ ಹೈದರಿಯಾ ಪೋತನ ಹಳ್ಳಿ ಗೌರಿಬಿದನೂರು ತಾ:	20.000–00	–
12.	ಮಸ್‌ಜಿದ್ ನೂರ್ ತರಿದಾಲ್ ಗೌರಿಬಿದನೂರು ತಾ :	20,000–00	–
13.	ಆಶೂರ್ ಖಾನ ಮಸೀದಿ ಇಡ್‌ಗೂರ್ ಗ್ರಾಮ ಗೌರಿಬಿದನೂರು ತಾ: 05–06 (ಇಲ್ಲ)	20,000–00	–

40, (119) ಶ್ರೀ ವಾಟಾಳ್ ನಾಗರಾಜ್ (ಚಾಮರಾಜ ನಗರ) : ಮಾನ್ಯ ಮುಖ್ಯ ಮಂತ್ರಿಗಳು ಈ ಕೆಳಗಿನ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ,

ಅ) ಸುವರ್ಣ ಕರ್ನಾಟಕ ವರ್ಷದಲ್ಲಿ ಸರ್ಕಾರ ಹಮ್ಮಿಕೊಂಡಿರುವ ಕಾರ್ಯಕ್ರಮಗಳಾವುವು?

ಆ) ಸುವರ್ಣ ಕರ್ನಾಟಕ ವರ್ಷವನ್ನು ಯಾವ ರೀತಿಯಲ್ಲಿ ಆಚರಣೆ ಮಾಡಲು ಸರ್ಕಾರ ತೀರ್ಮಾನಿಸಿದೆ.

ಶ್ರೀ ಹೆಚ್. ಡಿ. ಕುಮಾರಸ್ವಾಮಿ, ಮಾನ್ಯ ಮುಖ್ಯ ಮಂತ್ರಿಗಳು

ಅ) ವಿವರಗಳನ್ನು ಅನುಬಂಧದಲ್ಲಿ ನೀಡಿದೆ.

ಆ) ಕರ್ನಾಟಕವು ಏಕೀಕರಣಗೊಂಡು 2006ರ ನವೆಂಬರ್‌ಗೆ 50 ವರ್ಷಗಳು ತುಂಬುತ್ತಿವೆ. 2006ರ ನವೆಂಬರ್‌ನಲ್ಲಿ ಪ್ರಾರಂಭಗೊಂಡು 2007ರ ನವೆಂಬರ್ ವರೆಗೆ ಅರ್ಥಪೂರ್ಣವಾಗಿ ಪರಿಣಾಮಕಾರಿಯಾಗಿ ಶಾಶ್ವತ ಕಾರ್ಯಕ್ರಮಗಳನ್ನು ಸರ್ಕಾರದ ಎಲ್ಲಾ ಇಲಾಖೆಗಳೂ ರೂಪಿಸಿ ಆಚರಿಸ ಬೇಕೆಂದು ಉದ್ದೇಶಿಸಲಾಗಿದೆ. ಇದೇ ಸಂದರ್ಭದಲ್ಲಿ ವಿಶ್ವ ಕನ್ನಡ ಸಮ್ಮೇಳನ ನಡೆಸುವುದರ ಜೊತೆಗೆ ಸುವರ್ಣ ಸಂಸ್ಕೃತಿ ಸಮುಚ್ಚಯ, ಶ್ರೇಷ್ಠ ಗ್ರಂಥಗಳ / ಕೃತಿಗಳ ಪ್ರಕಟಣೆ, ಸುವರ್ಣ ಸಂಸ್ಕೃತಿ ದರ್ಶಿಕೆ ಮುಂತಾದ ಹಲವಾರು ಶಾಶ್ವತ ಕಾರ್ಯಕ್ರಮಗಳನ್ನು ಹಾಕಿಕೊಳ್ಳಲಾಗಿದೆ.

ಅನುಬಂಧ

ಮಾನ್ಯ ವಿಧಾನ ಸಭಾ ಸದಸ್ಯರಾದ ಶ್ರೀ ವಾಟಾಳ್ ನಾಗರಾಜ್ ರವರ ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂ. 119 ಕ್ಕೆ ಅನುಬಂಧ

1. ಕರ್ನಾಟಕ ಸಾಂಸ್ಕೃತಿಕ ಕ್ಷೇತ್ರದ 50 ವರ್ಷಗಳ ಸಾಧನೆಯನ್ನು ಬಿಂಬಿಸುವ ಸಾಂಸ್ಕೃತಿಕ ಸಮುಚ್ಛಯಗಳನ್ನು (ಪನೋರಮ) ನಿರ್ಮಿಸುವುದು. (ನಾಲ್ಕು ವಿಭಾಗಗಳಲ್ಲಿ)

2. 50 ವರ್ಷಗಳ ಸವಿನೆನಪಿಗೆ 50 ಅಪೂರ್ವವಾದ ಪುಸ್ತಕಗಳನ್ನು ಹೊರತರುವುದು.

3. ಕರ್ನಾಟಕ ಏಕೀಕರಣಕ್ಕೆ ದುಡಿದ ಮಹನೀಯರ ಸ್ಮಾರಕಗಳ ನಿರ್ಮಾಣ ಹಾಗೂ ಅವರ ಜೀವನ ಸಂಪುಟಗಳ ಪ್ರಕಟಣೆ.

4. 50 ವರ್ಷಗಳಲ್ಲಿ ಕರ್ನಾಟಕವು ಸಾಧಿಸಿದ ರಾಜ್ಯದ ವಿವಿಧ ಕ್ಷೇತ್ರ ಅಭೂತ ಪೂರ್ವ ಸಾಧನೆಗಳನ್ನು ಒಳಗೊಂಡ ರಾಜ್ಯ ಗ್ಯಾಸೆಟಿಯರ್ ಪ್ರಕಟಣೆ.

5. ಇತಿಹಾಸ ಆಗರವಾಗಿ ಆಧುನಿಕ ಪತ್ರಾಗಾರದ ನಿರ್ಮಾಣ

6. 50 ವರ್ಷಗಳ ಸಾಧನೆಯ ಪ್ರತಿಬಿಂಬವಾದ ಗ್ಯಾಲರಿಯ ನಿರ್ಮಾಣ

7. ರಾಜ್ಯದ ಪುರಾತತ್ವದ ದಾಖಲೀಕರಣ ಹಾಗೂ ಉತ್ಖನನದ ಸಿಂಹಾವಲೋಕನ.

8. ಕರ್ನಾಟಕ ಸ್ವರ್ಣಜಯಂತಿಯ ಸವಿನೆನಪಿಗೆ ಸ್ವರ್ಣ ಜಯಂತಿ ಸೌಧಗಳ ನಿರ್ಮಾಣ ಒಳಾಂಗಣದಲ್ಲಿ ಹೋರಾಟಗಾರರ ಸಮಗ್ರ ಮಾಹಿತಿಗಳ ಪ್ರದರ್ಶನ ಹಾಗೂ ಪರಾಮರ್ಶನ ವಿಭಾಗ.

9. ಕರ್ನಾಟಕ ವಿವಿಧ ರಂಗಗಳ ಸಾಧನೆ ಕುರಿತ ಸಾಕ್ಷ್ಯ ಚಿತ್ರಗಳ ನಿರ್ಮಾಣ

10. ಕರ್ನಾಟಕ ಏಕೀಕರಣದ ಅಂಗವಾಗಿ ಅಂತರ ರಾಜ್ಯ ಸಾಂಸ್ಕೃತಿಕ ಸಂವರ್ಧನೆ

11. ಕರ್ನಾಟಕ 50 ವರ್ಷಗಳ ಸಾಧನೆ ಕುರಿತಂತೆ ನೃತ್ಯ ರೂಪಕವನ್ನು ತಯಾರಿಸಿ ರಾಜ್ಯಾದ್ಯಂತ ಪ್ರದರ್ಶಿಸುವುದು ಹಾಗೂ ಈ ಅಂಗವಾಗಿ ಕಲಾ ಶಿಬಿರ ಕಲಾ ಪ್ರದರ್ಶನ, ಛಾಯಚಿತ್ರ ಪ್ರದರ್ಶನ, ಪ್ರಾಚ್ಯವಸ್ತುಗಳ ಪ್ರದರ್ಶನ ಮುಂತಾದ ಕಾರ್ಯಕ್ರಮಗಳನ್ನು ಏರ್ಪಡಿಸುವುದು.

12. ವಿವಿಧ ಜ್ಞಾನ ಶಾಖೆಗಳ ಮಾಹಿತಿ ಕೇಂದ್ರ ಡಿಜಿಟಲ್ ಲೈಬ್ರರಿಗಳನ್ನು ತೆರೆಯುವುದು.

42, (121) ಶ್ರೀ ವಾಟಾಳ್ ನಾಗರಾಜ್ (ಚಾಮರಾಜ ನಗರ) : ಮಾನ್ಯ ಮುಖ್ಯ ಮಂತ್ರಿಗಳು ಈ ಕೆಳಗಿನ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ,